# ಅಕ್ಕರದ ಅವ್ವ

'ಶೂದ್ರರ ಉದ್ಧಾರಕ್ಕೆ ಶಿಕ್ಷಣವೊಂದೇ ಮಾರ್ಗವಾಗಿಹುದು / ಶಿಕ್ಷಣದಿಂದ ಮನುಷ್ಯತ್ವ, ಪಶುತ್ವ ಸೋಲುತದೆ ನೋಡಿರಿ'.

ಇದು 'ಅಕ್ಷರದ ಅವ್ವ' ಎಂದು ಕರೆಸಿಕೊಂಡ ಸಾವಿತ್ರಿಬಾಯಿ ಫುಲೆ ಅವರ ಕವಿತಾ ಸಂಕಲನ 'ಕಾವ್ಯಫುಲೆ'ಯ ಸಾಲುಗಳು. 'ಬಾವನ್ಕಶಿ ಸುಭೋಧ ರತ್ನಾಕರ' ಅವರ ಎರಡನೆಯ ಸಂಕಲನ. ಈ ಸಂಕಲನದಲ್ಲಿ ಜ್ಯೋತಿಬಾ ಫುಲೆ ಅವರನ್ನು ಕುರಿತು ಕವಿತೆಗಳಿವೆ. ಜ್ಯೋತಿಬಾ ಅವರ ತಂದೆ ಹೂವಿನ ಕೃಷಿ ಮಾಡುತ್ತಿದ್ದು, ಹೂವಿನ ಅಂಗಡಿಯನ್ನು ಹೊಂದಿದ್ದರಿಂದ ಫುಲೆ ಎನ್ನುವ ಪದ ಅವರ ಕುಟುಂಬದೊಂದಿಗೆ ಸೇರಿತು.

ಕೆಳವರ್ಗದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಗಂಡ, ಹೆಂಡತಿಯರಾದ ಜ್ಯೋತಿಬಾ ಫುಲೆ ಹಾಗೂ ಸಾವಿತ್ರಿ ಬಾಯಿ ಫುಲೆ ಅಪಾರವಾಗಿ ಶ್ರಮಿಸಿದ್ದಾರೆ. ಸಮಾಜ ಸುಧಾರಕ ರಾಜಾರಾಂ ಮೋಹನರಾಯ್ ಅಕ್ಷರ ವಂಚಿತರಿಗೆ ಶಿಕ್ಷಣ ನೀಡುವುದರ ಮೂಲಕ ಸಮಾಜದ ಅನಿಷ್ಟ ಪದ್ಧತಿಗಳ ವಿರುದ್ಧ ಹೋಡುವುದರ ಬಗ್ಗೆ ಅಪಾರವಾದ ಕನಸು ಇಟ್ಟುಕೊಂಡಿದ್ದರು. ಜ್ಯೋತಿಬಾ ಫುಲೆಯವರು ಸಂಘಟಿತವಲ್ಲದ, ಧ್ವನಿಯಿಲ್ಲದ ಜಾತಿಗಳಿಗೆ ಶಿಕ್ಷಣ ಕೊಡುವುದರ ಬಗ್ಗೆ ಚಿಂತಿಸಿದರು.

ಪುಣೆಯ ಹತ್ತಿರವಿದ್ದ ಗ್ರಾಮದ ಶಾಲೆಗೆ ರೆವೆರೆಂಡ್ ಆ್ಯಡಂ ವೈಟ್ ಭೇಟಿ ಕೊಡುತ್ತಾರೆ. ಅಲ್ಲಿ ಬ್ರಾಹ್ಮಣ ಶಿಕ್ಷಕರೊಬ್ಬರು, ಕ್ಲಾಸ್ ರೂಂನಲ್ಲಿ ಬಡಿಗೆಗಳನ್ನು ಹಾಗೂ ಮಣ್ಣಿನ ಹೆಂಟೆಗಳನ್ನು ಇಟ್ಟುಕೊಂಡಿರುವುದನ್ನು ಕಂಡು ಪ್ರಶ್ನಿಸುತ್ತಾರೆ. ಉತ್ತಮ ಜಾತಿಯ ವಿದ್ಯಾರ್ಥಿಗಳಿಗೆ ಬಡಿಯಲು ಬಡಿಗೆಯನ್ನು, ಕೆಳಜಾತಿಯವರಿಗೆ ಹೊಡೆಯಲು ಮಣ್ಣಿನ ಹೆಂಟೆಯನ್ನು ಶಿಕ್ಷಕ ಬಳಸುತ್ತಿರುತ್ತಾನೆ. ಅಸ್ಪೃಶ್ಯರಿಗೆ ಬಡಿಗೆಯಿಂದ ಹೊಡೆದರೆ ಮೈಲಿಗೆಯಾಗುತ್ತದೆಂದು, ಒಂದು ಮಣ್ಣಿನ ಹೆಂಟೆಯ ಗುರಿ ತಪ್ಪಿದರೆ ಇನ್ನೊಂದನ್ನು ಎಸೆಯಬಹುದೆಂದು ಆತ ವೈಟ್ ಅವರಿಗೆ ಹೇಳುತ್ತಾನೆ. ಇಂತಹ ಸಂದರ್ಭದಲ್ಲಿ ಜ್ಯೋತಿಬಾ ಫುಲೆ ಹೆಣ್ಣುಮಕ್ಕಳಿಗಾಗಿ ಶಾಲೆಯೊಂದನ್ನು 1848ರಲ್ಲಿ ತೆರೆಯುತ್ತಾರೆ. ಆ ಶಾಲೆಯಲ್ಲಿ ಸಾವಿತ್ರಿಬಾಯಿ ಫುಲೆ ಮೊದಲ ಶಿಕ್ಷಕಿಯಾಗಿ ಸೇವೆ ಆರಂಭಿಸುತ್ತಾರೆ. ಈ ಶಾಲೆಯನ್ನು 'ಭಿಡೆ' ಎನ್ನುವವರ ಮನೆಯಲ್ಲಿ ಆರಂಭಿಸಲಾಗುತ್ತದೆ.

ಸಾವಿತ್ರಿಬಾಯಿ 1831ರಲ್ಲಿ ಸತಾರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಹುಟ್ಟುತ್ತಾರೆ. ಒಂಬತ್ತು ವರ್ಷದ ಆಕೆಯನ್ನು ಹದಿಮೂರು ವರ್ಷದ ಜ್ಯೋತಿಬಾ ಫುಲೆಯವರಿಗೆ ಕೊಟ್ಟು ವಿವಾಹ ಮಾಡಲಾಗುತ್ತದೆ. ಇಂಗ್ಲಿಷ್ ಕಲಿತ ಆ ಹುಡುಗ ಸಮಾಜದ ಬಗ್ಗೆ ಚಿಂತಿಸಬಲ್ಲ, ಅಕ್ಷರದ ಮಹತ್ವವನ್ನು ಬಲ್ಲವನಾಗಿದ್ದ. ಹೀಗಾಗಿ ಪತಿಯೇ ಗುರುವಾಗಿ ಸತಿಗೆ ವಿದ್ಯೆ ಕಲಿಸುವುದಲ್ಲದೆ ಅಹ್ಮದ್ ನಗರದ ಮಿಸ್ ಫರಾರ್ ಫಾರ್ಮಲ್ ಸ್ಕೂಲಿಗೆ ಶಿಕ್ಷಕ ತರಬೇತಿಗೆ ಕಳಿಸುತ್ತಾರೆ.

ಆಕೆ ತನ್ನ ಹದಿನೇಳನೆಯ ವರ್ಷಕ್ಕೆ ಶಿಕ್ಷಕ ತರಬೇತಿ ಮುಗಿಸುತ್ತಾರೆ. ಭಾರತದ ಮೊತ್ತಮೊದಲ ಶಿಕ್ಷಕಿಯೆಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಾರೆ. ಗಂಡ ಹೆಂಡತಿಯ ಈ ಕ್ರಾಂತಿಕಾರಕ ನಡೆ ಸನಾತನವಾದಿಗಳನ್ನು ಸಿಟ್ಟಿಗೆಬ್ಬಿಸುತ್ತದೆ. ಫುಲೆಯವರು ತಮ್ಮ ವಿಚಾರಪೂರ್ಣ ಲೇಖನ ಮತ್ತು ಭಾಷಣಗಳಲ್ಲಿ ಮನುಸ್ಮೃತಿಯಲ್ಲಿ ಮಹಿಳೆಯರ ಮೇಲೆ ವಿಧಿಸಲಾದ ಸಾಮಾಜಿಕ ನಿರ್ಬಂಧಗಳನ್ನು ಟೀಕಿಸುತ್ತಾರೆ. 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎನ್ನುವಂತಹ ಕಟ್ಟಲೆಗಳನ್ನು ಮುರಿಯಬೇಕೆಂದರೆ ಅದು ಶಿಕ್ಷಿತ ಮಹಿಳೆಯರಿಂದಲೇ ಸಾಧ್ಯ ಎಂಬ ಅರಿವು ಫುಲೆ ದಂಪತಿಗಿತ್ತು. ಫುಲೆ ಅವರ ಜೊತೆಯಲ್ಲಿದ್ದ ಮೇಲುವರ್ಗದ ಸ್ನೇಹಿತರು, ಶಿಕ್ಷಕರು ಈ ಯೋಜನೆಗೆ ಕೈ ಜೋಡಿಸುತ್ತಾರೆ.

ಸನಾತನವಾದಿಗಳು ಫುಲೆಯವರ ತಂದೆಯವರಾದ ಗೋವಿಂದರಾವ್ ಮೂಲಕ ಒತ್ತಡ ಹೇರಲು ಆರಂಭಿಸುತ್ತಾರೆ. ನಿಮ್ಮ ಮಗ, ಸೊಸೆ ಸಮಾಜವಿರೋಧಿ ಕೆಲಸದಲ್ಲಿ ತೊಡಗಿದ್ದು, ನಿಮ್ಮ ಇಡೀ ಕುಟುಂಬ ದೇವರ ಅವಕೃಪೆಗೆ ಒಳಗಾಗುತ್ತದೆ ಎಂದು ಹೆದರಿಸುತ್ತಾರೆ. ಶಾಲಾ ಚಟುವಟಿಕೆಗಳನ್ನು ನಿಲ್ಲಿಸುವಂತೆ ಹೇಳಿದ ತಂದೆಯನ್ನು ವಿರೋಧಿಸಲಾಗದ ಫುಲೆ, ಹೆಂಡತಿಯೊಂದಿಗೆ ಮನೆಬಿಟ್ಟು ಹೊರಬರುತ್ತಾರೆ. ಅವರ ಜೊತೆ ಬೋಧನೆಯಲ್ಲಿ ಸಹಕರಿಸುತ್ತಿದ್ದ ಫಾತಿಮಾ ಶೇಖ್ ಅಂತಹ ಮಹಿಳೆಯರಿಗೆ ಕಿರುಕುಳ ನೀಡಲಾರಂಭಿಸುತ್ತಾರೆ.

ಸಾವಿತ್ರಿಯವರು ಶಾಲೆಗೆ ಹೋಗುವ ಬರುವ ದಾರಿಯಲ್ಲಿ ಅವಮಾನಕರವಾಗಿ ನಿಂದಿಸುವುದು, ಕಲ್ಲು ಮಣ್ಣು, ಸಗಣಿ ಉಂಡೆಗಳನ್ನು ಎಸೆಯುವುದು ನಡೆಯುತ್ತಿತ್ತು. ಮೊದಮೊದಲು ಹೆದರಿಕೊಳ್ಳುತ್ತಿದ್ದ ಅವರು ನಂತರ ಆ ಘಟನೆಗಳನ್ನು ಎದೆಗುಂದದೆ ಸ್ವೀಕರಿಸುತ್ತಾರೆ. ಹೋಗುವಾಗ ಒಂದು ಹಳೆಯ ಸೀರೆ ಉಟ್ಟು ಶಾಲೆ ಸೇರಿದ ನಂತರ ಮಲಿನವಾದ ಆ ಸೀರೆಯನ್ನು ಬಿಚ್ಚಿಟ್ಟು ಮತ್ತೊಂದು ಸೀರೆಯನ್ನು ಉಟ್ಟುಕೊಳ್ಳುತ್ತಿದ್ದರು. 'ತಮ್ಮ ಮೇಲೆ ಕಲ್ಲು ಎಸೆದವರನ್ನು ದೇವರು ಕ್ಷಮಿಸಲಿ. ನಾನು ನನ್ನ ಕರ್ತವ್ಯವನ್ನಷ್ಟೇ ಮಾಡುತ್ತಿದ್ದೇನೆ' ಎಂದು ತಮ್ಮನ್ನು ಸಮಾಧಾನಿಸಿಕೊಳ್ಳುತ್ತಿದ್ದರು.

ಜಗತ್ತಿನಾದ್ಯಂತ ಮಹಿಳೆಯರ ಪರಿಸ್ಥಿತಿ ಹೀಗೇ ಇತ್ತು. ಸಮಾಜದಲ್ಲಿನ ಅನಿಷ್ಟಗಳನ್ನು ಕುರಿತು ಮಾತನಾಡುವುದನ್ನಾಗಲೀ ಬರೆಯುವುದನ್ನಾಗಲೀ ಪುರುಷ ಸಮಾಜಕ್ಕೆ ಸಹಿಸಲು ಸಾಧ್ಯವಿರಲಿಲ್ಲ. ನಿಂತ ಕಾಲಿನಲ್ಲಿ ಮನೆಯಿಂದ ಹೊರಬಂದು ಶಾಲೆಯನ್ನು ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಈ ದಂಪತಿಯ ಕಾರ್ಯಗಳಿಗೆ ಹಲವು ಸ್ನೇಹಿತರು ಕೈಜೋಡಿಸುತ್ತಾರೆ.

ಫುಲೆ ದಂಪತಿ ಆರಂಭಿಸಿದ ಶಿಕ್ಷಣ ಕ್ರಾಂತಿ ದೊಡ್ಡ ಹೋರಾಟವಾಗಿ ಬೆಳೆಯುತ್ತದೆ. ನಾಲ್ಕು ವರ್ಷಗಳಲ್ಲಿ ಹದಿನೆಂಟು ಶಾಲೆಗಳನ್ನು ತೆರೆಯುತ್ತಾರೆ. ಪುಣೆಯ ಪಂಡಿತ ರಮಾಬಾಯಿ, ಆನಂದಿಬಾಯಿ ಜೋಷಿ, ರಮಾಬಾಯಿ ರಾನಡೆ ಮೊದಲಾದವರು ಇವರ ಸಂಪರ್ಕದಲ್ಲಿದ್ದರು.

ಗಾಂಧೀಜಿಯವರಿಂದ 'ನಿಜವಾದ ಮಹಾತ್ಮ' ಎಂದು ಕರೆಸಿಕೊಂಡ ಮಹಾತ್ಮ ಜ್ಯೋತಿಬಾ ಫುಲೆಯವರ ಪತ್ನಿಯಾಗಿ, ಮೊಟ್ಟಮೊದಲ ಹೆಣ್ಣುಮಕ್ಕಳ ಶಿಕ್ಷಣದ ರೂವಾರಿಯೂ ಆದ ಸಾವಿತ್ರಿಬಾಯಿ ನಿಜವಾದ ಅರ್ಥದಲ್ಲಿ 'ಅಕ್ಕರದ ಅವ್ವ'.

ಹೆಣ್ಣುಮಕ್ಕಳ ನಡೆ, ನುಡಿ, ವಸ್ತ್ರ ಸಂಹಿತೆಗಳ ಬಗ್ಗೆ ಆಗಾಗ ಏಳುವ ಚರ್ಚೆಗಳ ನಡುವೆ ದಿಟ್ಟವಾಗಿ ನಿಂತ ಮಾತನಾಡುವ ಮಹಿಳೆಯರು ಹಲವರು ನಮ್ಮಲ್ಲಿದ್ದಾರೆ. ಈ ಹಲವರ ನಡುವೆ ಮಿನುಗುವ ಒಂಟಿ ನಕ್ಷತ್ರವಾದ ಈ ಅಕ್ಕರದ ಅವ್ವ ಎಲ್ಲಾ ಕಾಲಕ್ಕೂ ವಂದನಾರ್ಹರಾಗಿದ್ದಾರೆ.

■ **ಅಮೃತಮತಿ**



॥ ಶ್ರೀ ಗುರು ಓಂ ಶ್ರೀ ಸದ್ಗುರು ಸಾಯಿರಾಂ ॥ ಭಾರತದ ಪ್ರಖ್ಯಾತ ಜ್ಯೋತಿಷ್ಯರು

ಬಿಳಿಗಿರಿ ರಂಗನಬೆಟ್ಟದಿಂದ ನೇರ ಪರಿಹಾರ.

**ಓಂ ಶ್ರೀ ಸಾಯಿಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು**

ಕೇರಳದ ಮಹಾಜ್ಞಾನಿ ದೈವಜ್ಞ । ಮಾತಾ ಕಾಳಿಕಾದೇವಿ ಆರಾಧಕರು



**ಪಂಡಿತ್ ಶಕ್ತಿಪ್ರಸಾದ್ ಗುರೂಜಿ 9916774449**

ನಿಮ್ಮ ಸಮಸ್ಯೆಗಳಾದ ಮಾಟ-ಮಂತ್ರ, ಶತ್ರುನಾಶ, ಸ್ತ್ರೀ-ಪುರುಷ ವಶೀಕರಣ, ಕೋರ್ಟ್‌ಕೇಸ್, ವ್ಯಾಪಾರದಲ್ಲಿ ತೊಂದರೆ, ಉದ್ಯೋಗ, ವಿದೇಶ ಪ್ರಯಾಣ, ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕೆರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿಚಾತನ್ ತಪೋಶಕ್ತಿಯಿಂದ 2 ದಿನಗಳಲ್ಲಿ ಅಂತಿಮ ಪರಿಹಾರ ಮಾಡುತ್ತಾರೆ.

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.

ಕೇರಳದ ಅಷ್ಟಮಂಗಲ ಪ್ರಶ್ನೆ, ಅರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮ ದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಗುಪ್ತವಾಗಿ ಇಡಲಾಗುವುದು.

Get your Any Problem 100% Solutions with in 2 Days.

ವಿ.ಸೂ.: ನಮ್ಮನ್ನು ಬಿಟ್ಟು ಬೇರೆ ಯಾರಾದಾರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.